106

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 43 ಆಶೀಸೇ 2013

ಕರ್ನಾಟಕ ಸರ್ಕಾರ ಸಚಿವಾಲಯ,
ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:09/04/2014.

## ಅಧಿಕೃತ ಜ್ಞಾಪನ

**ವಿಷಯ:** ಕರ್ನಾಟಕ ಲೋಕ ಸೇವಾ ಆಯೋಗದಿಂದ ಶೀಘ್ರಲಿಪಿಗಾರರ ಹುದ್ದೆಯ ನೇರನೇಮಕಾತಿಗಾಗಿ ಕರ್ನಾಟಕ ಸರ್ಕಾರ ಸಚಿವಾಲಯಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗುವ ಬಗ್ಗೆ.

**ಉಲ್ಲೇಖ:** ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ: ಆರ್(3)08-10/13-14/ಪಿಎಸ್‌ಸಿ; ದಿನಾಂಕ:25/06/2013.

* * *

ಕರ್ನಾಟಕ ಲೋಕ ಸೇವಾ ಆಯೋಗದ ಉಲ್ಲೇಖಿತ ಪತ್ರದನ್ವಯ ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆಯಾಗಿರುವ ಈ ಕೆಳಗೆ ನಮೂದಿಸಿರುವ ಅಭ್ಯರ್ಥಿಗಳನ್ನು ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಶೀಘ್ರಲಿಪಿಗಾರರ ಹುದ್ದೆಗೆ ವೇತನ ಶ್ರೇಣಿ ರೂ.16000-400-17200-450-19000-500-21000-600-24600-700-28800-800-29600+ವಿಶೇಷ ವೇತನ ರೂ.165/- ಗಳಲ್ಲಿ ಈ ಕೆಳಕಂಡ ಷರತ್ತುಗಳೊಂದಿಗೆ ನೇಮಕ ಮಾಡಿದೆ:

| ಕ್ರಮ ಸಂಖ್ಯೆ | ಅಭ್ಯರ್ಥಿಗಳ ಹೆಸರು ಮತ್ತು ವಿಳಾಸ ಶ್ರೀ/ಶ್ರೀಮತಿ |
|---|---|
| 1 | ಆರ್.ಸೌಮ್ಯ D/o ಸಿ.ರಮೇಶ್, ನಂ.40, ಸಿಂಡಿಕೇಟ್ ಬ್ಯಾಂಕ್ ಕಾಲೋನಿ, ಮಾಗಡಿ ಮುಖ್ಯರಸ್ತೆ, ಬೆಂಗಳೂರು-560079. |
| 2 | ಶ್ರೀದೇವಿ ಹಾಬಣ್ಣವರ್, D/o ಹನುಮಂತಪ್ಪ, 'ಇಟಿಯವರ್' ಓಣಿ, ಉಗರಗೋಳ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ-591110 |
| 3 | ಸುಷ್ಮಾ ಅನಿಲ ದೊಡ್ಡಮನಿ, D/o ಅನಿಲ ದೊಡ್ಡಮನಿ, ನಂ.54, ಗಂಟಿಕೇರಿ ಓಣಿ, ಬಸವೇಶ್ವರ ದೇವಸ್ಥಾನದ ಹತ್ತಿರ, ಸಿ.ಬಿ.ಟಿ.ಹುಬ್ಬಳ್ಳಿ, ಧಾರವಾಡ ಜಿಲ್ಲೆ-580020 |
| 4 | ಸುರೇಶ್ ಸಾಗರ್, S/o ಕಲ್ಲಪ್ಪ ಸಾಗರ್, 'ಬಸವ ನಿಲಯ' ನಂ.33/3, 4ನೇ ಕ್ರಾಸ್, ಸರಸ್ವತಿ ಮಠ, ನಂದಿನಿ ಲೇಔಟ್, ಬೆಂಗಳೂರು-560096 |
| 5 | ಮಹಾಳಪ್ಪ ಮಡ್ಡಪ್ಪ ಕಗ್ಗೋಡ, S/o ಮಡ್ಡಪ್ಪ ಕಗ್ಗೋಡ, ಕನಕದಾಸನಗರ, ಶಿವಣಗಿ ಗ್ರಾಮ, ವಿಜಾಪುರ ತಾಲ್ಲೂಕು, ವಿಜಾಪುರ ಜಿಲ್ಲೆ-586127 |
| 6 | ಹಾಜಿರಾಬಾ, D/o ಮೊಹಮ್ಮದ ಇಬ್ರಾಹಿಂಸಾಬ ಸೋಲಾಪೂರ, ಎಸ್.ಎಂ.ಸೋಲಾಪೂರ, ಗುಡೂರು ಅಂಚೆ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ-587202 |
| 7 | ನೇತ್ರಾವತಿ.ಸಿ D/o ಚಿಕ್ಕಪುಟ್ಟಯ್ಯ, ನಂ.9, 10ನೇ ಕ್ರಾಸ್, 1ನೇ ಮುಖ್ಯ ರಸ್ತೆ, ಕೆ.ಪಿ.ಅಗ್ರಹಾರ, ಭುವನೇಶ್ವರಿ ನಗರ, ಬೆಂಗಳೂರು-560023. |

1. ಅಭ್ಯರ್ಥಿಗಳು ಈ ಆದೇಶವನ್ನು ನೋಂದಾಯಿತ ಅಂಚೆ ಮೂಲಕ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ 15 ದಿನಗಳೊಳಗಾಗಿ ಸೇವೆಗೆ ಹಾಜರಾಗತಕ್ಕದ್ದು.
2. ಅಭ್ಯರ್ಥಿಗಳು ಹುಟ್ಟಿದ ದಿನಾಂಕ, ಶೈಕ್ಷಣಿಕ ಅರ್ಹತೆಗಳು ಹಾಗೂ ಮಾಜಿ ಸೈನಿಕ, ಅಂಗವಿಕಲ ಮುಂತಾದ ಅಂಶಗಳ ಬಗ್ಗೆ ಮೂಲ ದೃಢೀಕರಣವನ್ನು ಸೇವೆಗೆ ಹಾಜರಾಗುವ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
3. ಸದರಿ ಅಭ್ಯರ್ಥಿಗಳು ಶೀಘ್ರಲಿಪಿಯಲ್ಲಿ ಉಕ್ತಲೇಖನವನ್ನು ತೆಗೆದುಕೊಂಡು ಅನುವಾದಿಸಿ ಬೆರಳಚ್ಚು ಮಾಡುವುದಲ್ಲದೇ ಅವಶ್ಯಕತೆ ಇದ್ದಲ್ಲಿ ಸಾಮಾನ್ಯ ಬೆರಳಚ್ಚು ಕೆಲಸವನ್ನು ಸಹ ನಿರ್ವಹಿಸಬೇಕಾಗುತ್ತದೆ.

105

4 ಅಭ್ಯರ್ಥಿಗಳು ನೀಡಿರುವ/ನೀಡುವ ಯಾವುದೇ ಮಾಹಿತಿ, ಪ್ರಮಾಣ ಪತ್ರಗಳು ಮತ್ತು ಇತರ ದಾಖಲೆಗಳು ಪರಿಶೀಲನೆ ನಂತರ ತಪ್ಪು ಎಂದು ಕಂಡುಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ತಕ್ಷಣದಿಂದಲೇ ಅವರನ್ನು ಸೇವೆಯಿಂದ ತೆಗೆದುಹಾಕಲಾಗುವುದು;

5 ಸದರಿ ಅಭ್ಯರ್ಥಿಗಳು ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸುವ ವಿವಿಧ ತರಬೇತಿಗಳನ್ನು ಹೊಂದಬೇಕಾಗುತ್ತದೆ;

6 ಸದರಿ ಅಭ್ಯರ್ಥಿಗಳು ಸೇವೆಗೆ ಹಾಜರಾದ ದಿನಾಂಕದಿಂದ 2 ವರ್ಷ ಖಾಯಂಪೂರ್ವ ಸೇವಾವಧಿಯಲ್ಲಿ (ಪ್ರೊಬೇಷನ್) ಇರುತ್ತಾರೆ. ಈ ಖಾಯಂಪೂರ್ವ ಸೇವಾವಧಿಯಲ್ಲಿ ಶೀಘ್ರಲಿಪಿಗಾರರ ಹುದ್ದೆಗೆ ನಿಗದಿಪಡಿಸಿದ/ನಿಗದಿಪಡಿಸುವ ಇಲಾಖಾ ಪರೀಕ್ಷೆಯಲ್ಲಿ ಹಾಗೂ ಕರ್ನಾಟಕ ನಾಗರಿಕ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ರನ್ವಯ ನಿಗದಿಪಡಿಸಿರುವ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕಾಗುತ್ತದೆ. ಇಲ್ಲದಿದ್ದಲ್ಲಿ, ನೇಮಕಾತಿಯನ್ನು ರದ್ದು ಪಡಿಸಲು ನಿಯಮಾನುಸಾರ ಕ್ರಮ ಇಡಲಾಗುವುದು;

7 ದೈಹಿಕ ಅರ್ಹತೆಯ ಬಗ್ಗೆ ಸರ್ಕಾರಿ ವೈದ್ಯಾಧಿಕಾರಿಗಳಿಂದ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಗೂ ಅಭ್ಯರ್ಥಿಗಳು ವಾಸಿಸುತ್ತಿರುವ ಕ್ಷೇತ್ರದ ಸಂಬಂಧಿಕರಲ್ಲದ ಕನಿಷ್ಠ ಇಬ್ಬರು ಗಣ್ಯ ವ್ಯಕ್ತಿ (ಸಾರ್ವಜನಿಕ ಪ್ರತಿನಿಧಿ) ಗಳಿಂದ ಪಡೆದ ನಡತೆ ಪ್ರಮಾಣ ಪತ್ರಗಳನ್ನು, ಇತ್ತೀಚಿನ ಎರಡು ಭಾವಚಿತ್ರಗಳು ಮತ್ತು ವಿವಾಹಿತರಾಗಿದ್ದಲ್ಲಿ ಪತಿ-ಪತ್ನಿಯ ಜಂಟಿ ಭಾವಚಿತ್ರವನ್ನು (ಪಾಸ್‌ಪೋರ್ಟ್ ಅಳತೆ) ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು;

8 ದಿ:01/04/2006 ರ ನಂತರ ಹೊಸದಾಗಿ ಸಿವಿಲ್ ಸೇವೆಗೆ ನೇಮಕ ಹೊಂದುವವರಿಗೆ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ (ಎಸ್‌ಪಿಎಲ್) 04 ಪಿಇಟಿ 2005; ದಿ:31/03/2006 ರನ್ವಯ ನಿಗದಿತ ವಂತಿಗೆ ಪಿಂಚಣಿ ಯೋಜನೆಗೆ ಒಳಪಟ್ಟಿರುತ್ತಾರೆ.

9 ಮೇಲ್ಕಾಣಿಸಿದ ಷರತ್ತುಗಳಲ್ಲದೆ ಸರ್ಕಾರಿ ನೌಕರರಿಗೆ ಅವನ/ಅವಳ ಹುದ್ದೆಗಳ ಬಗ್ಗೆ ಕಾಲಕಾಲಕ್ಕೆ ಅನ್ವಯಿಸುವ ಇತರ ಸೇವಾನಿಯಮಗಳಿಗೆ ಹಾಗೂ ಆದೇಶಗಳಿಗೆ ಬದ್ಧರಾಗಿರುತ್ತಾರೆ.

**ಸೂಚನೆ:**

1. ಅಭ್ಯರ್ಥಿಗಳಿಗೆ ಕೆಲಸಕ್ಕೆ ಹಾಜರಾಗಲು ಬರುವಾಗ ಯಾವುದೇ ಪ್ರಯಾಣ ಭತ್ಯೆಯನ್ನು ನೀಡಲಾಗುವುದಿಲ್ಲ.
2. ಅಭ್ಯರ್ಥಿಗಳು ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ-2), ಕೊಠಡಿ ಸಂಖ್ಯೆ:430, 4ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ॥ ಅಂಬೇಡ್ಕರ್ ಬೀದಿ, ಬೆಂಗಳೂರು-560001 ಇವರ ಮುಂದೆ ಕೆಲಸಕ್ಕೆ ಹಾಜರಾಗತಕ್ಕದ್ದು.

(ಸಂಜೀವ್ ಕುಮಾರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಕಾರ್ಯದರ್ಶಿ, ಸಿಆಸುಇ.
3. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಕಾರ್ಯದರ್ಶಿ, ಸಿಆಸುಇ (ವಿದ್ಯುನ್ಮಾನ ಆಡಳಿತ).
5. ಸರ್ಕಾರದ ಜಂಟಿ ಕಾರ್ಯದರ್ಶಿ, ಸಿಆಸುಇ (ಸಿಬ್ಬಂದಿ).
6. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಿಆಸುಇ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಲೆಕ್ಕಪತ್ರ) / (ಸಿಬ್ಬಂದಿ) / (ಕಾರ್ಯಕಾರಿ).
8. ಮುಖ್ಯ ಗ್ರಂಥಾಧಿಕಾರಿ, ಕರ್ನಾಟಕ ಸರ್ಕಾರ ಸಚಿವಾಲಯ ಗ್ರಂಥಾಲಯ, ವಿಧಾನಸೌಧ.
9. ಶಾಖಾಧಿಕಾರಿ, ಸಿಆಸುಇ (ಆಡಳಿತ ಕೋಶ).
10. ಸಂಬಂಧಪಟ್ಟ ಅಭ್ಯರ್ಥಿಗಳಿಗೆ ನೋಂದಾಯಿತ ಅಂಚೆ ಸ್ವೀಕೃತಿ ದಾಖಿ ಮುಖಾಂತರ.
11. ಸೇವಾಪುಸ್ತಕ ಸಹಾಯಕರು, ಸಿಆಸುಇ (ಆಡಳಿತ-2).
12. ಶಾಖಾ ರಕ್ಷಾ ಕಡತ / ಬಿಡಿ ಪ್ರತಿಗಳು.